# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಎಂ ವಿ ಸಿ.ನಂ.942/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಗಿರೀಶ್ | R.W | 4 |
| ತಂದೆಯ ಹೆಸರು | ಭೀಮರಾವ್ | | |
| ವಯಸ್ಸು | 49 ವರ್ಷ | | |
| ಉದ್ಯೋಗ | ಡಿ ವೈ ಎಸ್ ಪಿ, ಕರ್ನಾಟಕ ಲೋಕಾಯುಕ್ತ, ಪ್ರ.ವ.ಬೋ ಬೆಂಗಳೂರು | | |
| ವಾಸಸ್ಥಳ | ಬೆಂಗಳೂರು | ದಿನಾಂಕಃ 17-06-2025 | |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಶ್ರೀ ಕೆ ಎಂ ಎಸ್ ಎನ್ ವಕೀಲರಿಂದ 2ನೇ ಎದುರುದಾರರ ಪರವಾಗಿ**

ನಾನು ಸಕಲೇಶಪುರ ನಗರ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕರಾಗಿ ಜನವರಿ 2020 ರಿಂದ ಸೆಪ್ಟೆಂಬರ್ 2021 ರ ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ಮೊಕದ್ದಮೆ ನಂ.117/2021 ರಲ್ಲಿ ನಾನು ತನಿಖಾಧಿಕಾರಿಯಾಗಿರುತ್ತೇನೆ. ಸದರಿ ಪ್ರಕರಣದಲ್ಲಿ ಅಂತಿಮ ವರದಿಯನ್ನು ನನ್ನ ನಂತರ ಬಂದಿರುವ ತನಿಖಾಧಿಕಾರಿ ವೃತ್ತ ನಿರೀಕ್ಷಕರಾದ ಚೈತನ್ಯ ರವರು ಸಲ್ಲಿಸಿರುತ್ತಾರೆ. ದಿನಾಂಕ 25-07-2021 ರಂದು ಸದರಿ ಪ್ರಕರಣದಲ್ಲಿ ಹೇಳಿರುವ ಅಪಘಾತವು ಆಗಿರುತ್ತದೆ. ದೂರನ್ನು ದಿನಾಂಕ 03-08-2021 ರಂದು ವಿಶ್ವಾಸ್ ರವರು ನೀಡಿರುತ್ತಾರೆ. ಬುಲೆರೋ ವಾಹನವು ರಸ್ತೆ ಮಧ್ಯದಲ್ಲಿ ಏಕಾಏಕಿ ಯಾವುದೇ ಸೂಚನೆ ನೀಡಿದೇ ಬ್ರೇಕ್ ಹಾಕಿದ ಕಾರಣ ಮಾರುತಿ ವ್ಯಾನ್ ಹಿಂದಿನಿಂದ ಡಿಕ್ಕಿಪಡಿಸಿರುತ್ತದೆ. ಬುಲೆರೋ ವಾಹನ ನಂ. ಕೆ ಎ 12 ಎಂ 3450 ಆಗಿರುತ್ತದೆ. ಶವ

ತನಿಖಾ ಸಮಯದಲ್ಲಿ ನಾನು ಮೃತನ ತಾಯಿ ಪೂರ್ಣಿಮ, ವೈಭವಿ, ವಿಶ್ವಪ್ರಿಯಾ, ಕಾರ್ತಿಕ್ ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅವರ ಹೇಳಿಕೆಗಳಲ್ಲಿ ಬುಲೆರೋ ವಾಹನ ನಂ. ಕೆ ಎ 12 ಎಂ 3450 ಎಂದು ನಮೂದಾಗಿರುತ್ತದೆ. ಕುಮಾರ್, ವಿನೋದ್ ಮತ್ತು ಲೋಕೇಶ್ ರವರ ಹೇಳಿಕೆಗಳನ್ನು ಶವ ತನಿಖಾ ಸಮಯದಲ್ಲಿ ಎ ಎಸ್ ಐ ಪಾಪಣ್ಣ ರವರು ಪಡೆದುಕೊಂಡಿರುತ್ತಾರೆ. ಅವರುಗಳ ಹೇಳಿಕೆಯಲ್ಲಿ ವಾಹನದ ನಂ. ಕೆ ಎ 12 ಎಂ 3450 ಎಂದು ನಮೂದಾಗಿರುತ್ತದೆ. ಅಂತಿಮ ವರದಿಯಲ್ಲಿ ವಾಹನ ಸಂಖ್ಯೆ ಕೆ ಎ 18 ಎಂ 9450 ಎಂದು ನಮೂದಾಗಿರುತ್ತದೆ. ಸಾಕ್ಷಿದಾರರ ಹೇಳಿಕೆಗಳಲ್ಲಿ ಮತ್ತು ಅಂತಿಮ ವರದಿಯಲ್ಲಿ ಅಪಘಾತ ಪಡಿಸಿದ ವಾಹನ ಸಂಖ್ಯೆ ಬೇರೆ ಬೇರೆ ಇರುತ್ತದೆ. ವಾಹನ ಸಂಖ್ಯೆ ಕೆ ಎ 12 ಎಂ 3450 ರ ಮಾಲೀಕರಿಗೆ ನೋಟೀಸ್ ನೀಡಿರುವುದಿಲ್ಲ. ಸದರಿ ವಾಹನ ಸಂಖ್ಯೆ ಕೆ ಎ 12 ಎಂ 3450 ಕ್ಕೆ ವಿಮಾ ಸೌಲಭ್ಯ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಅಂತಿಮ ವರದಿಯಲ್ಲಿ ವಾಹನ ನಂ. ಕೆ ಎ 18 ಎಂ 9450 ಎಂದು ನಮೂದಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಠಾಣಾ ಕಡತದಲ್ಲಿ ಯಾವ ಕಾರಣಕ್ಕಾಗಿ ವಾಹನದ ಸಂಖ್ಯೆ ಅಂತಿಮ ವರದಿಯಲ್ಲಿ ಬದಲಾಗಿರುತ್ತದೆ ಎಂದು ನಮೂದು ಇರುವುದಿಲ್ಲ. ಪ್ರ ವ ವ ದಲ್ಲಿ ನಮೂದು ಮಾಡಿರುವ ವಾಹನದ ಸಂಖ್ಯೆಯನ್ನು ಬದಲಾವಣೆ ಮಾಡಲು ನ್ಯಾಯಾಲಯದಿಂದ ಅನುಮತಿ ಪಡೆದಿರುವುದಿಲ್ಲ. ಸ್ಥಳ ಮಹಜರ್ ನಲ್ಲಿ ಅಪಘಾತ ಪಡಿಸಿದ ಬುಲೆರೋ ವಾಹನ ನಂ.ಕೆ ಎ 12 ಎಂ 3450 ಎಂದು ನಮೂದು ಇರುತ್ತದೆ.

**ಪಾಟೀ ಸವಾಲುಃ 4ನೇ ಎದುರದಾರರ ಪರ ಶ್ರೀ ಯು ಎಂ ಸಿ ವಕೀಲರಿಂದ**

ಕೆ ಎ 12 ಎಂ 3450 ಬುಲೆರೋ ವಾಹನದಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ. ಸದರಿ ಬುಲೆರೋ ವಾಹನದ ಚಾಲಕನು ರಸ್ತೆಯ ಮಧ್ಯದಲ್ಲಿ ಏಕಾ ಏಕಿ ಬ್ರೇಕ್

ಹಾಕಿದ ಕಾರಣವೇ ಅಪಘಾತ ಆಗಿರುತ್ತದೆ ಎಂದರೆ ಸರಿ. ನಿ.ಪಿ 7 ನಕ್ಷೆಯಲ್ಲಿ ಅಪಘಾತ ಸ್ಥಳದಲ್ಲಿ ಯಾವುದೇ ಉಬ್ಬುಗಳನ್ನು ಕಾಣಿಸಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತಕ್ಕೆ ಮಾರುತಿ ವ್ಯಾನ್ ನ ಚಾಲಕನ ಯಾವುದೇ ನಿರ್ಲಕ್ಷ್ಯತೆ ಇರುವುದಿಲ್ಲ ಎಂದರೆ ಸರಿ.

**ಪಾಟೀ ಸವಾಲಿಗೆ ಅರ್ಜಿದಾರರ ಪರ ವಕೀಲರಾದ ಶ್ರೀ ಎ ವಿ ಕೆ ವಕೀಲರು ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಪಾಟೀ ಸವಾಲುಃ3ನೇ ಎದುರುದಾರರ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.